158ನೇ ಮು ಉ SL.NO:-69 ದಿ:-17-03-2026

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಉಮಾಶ್ರೀ ಇವರ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ.**

**ಸೂಚನೆ:**

ದಿನಾಂಕ:16.03.2026 ರ ವಿಜಯವಾಣಿ ದಿನಪತ್ರಿಕೆಯಲ್ಲಿ "ಸಿ.ಸಿ. ಸಿಗದೇ ವಾಹನ ಮಾಲೀಕರ ಪರದಾಟ" ಎಂಬ ವಿಷಯವು ಪ್ರಕಟವಾಗಿದ್ದು, ವಾಹನ ಮಾಲೀಕತ್ವ ವರ್ಗಾವಣೆಗೆ ಅರ್ಜಿ ಸಲ್ಲಿಸಿ ತಿಂಗಳುಗಳೇ ಕಳೆದರೂ ಪ್ರಾದೇಶಿಕ ಸಾರಿಗೆ ಕಛೇರಿ (ಆರ್.ಟಿ.ಓ) ಗಳಲ್ಲಿ ಕ್ಲೀಯರೆನ್ಸ್ ಸರ್ಟಿಫಿಕೇಟ್ (ಸಿ.ಸಿ.) ದೊರೆಯದೆ ವಾಹನ ಮಾಲೀಕತ್ವ ವರ್ಗಾವಣೆಯಾಗದೆ ಮಾಲೀಕರು ಪರದಾಡುವ ಪರಿಸ್ಥಿತಿ ಉದ್ಭವಿಸಿದೆ. ಸಿ.ಸಿ. ಸಿಗದ ಕಾರಣ ಈ ಅವಧಿಯಲ್ಲಿ ವಾಹನ ಅಪಘಾತ ಸಂಭವಿಸಿದರೆ ವಿಮಾ ಸೌಲಭ್ಯವು ಸಿಗುವುದಿಲ್ಲ. ಹಾಗಾಗಿ, ಈ ಸಮಸ್ಯೆಗೆ ಪರಿಹಾರ ಕೊಡಬೇಕು ಎಂದು ವಾಹನ ಮಾಲೀಕರು ಸಾರಿಗೆ ಇಲಾಖೆಗೆ ಆಗ್ರಹಿಸಿದ್ದಾರೆ.

ಒನ್ ನೇಷನ್ ಒನ್ ಕಾರ್ಡ್ ಯೋಜನೆ ಜಾರಿ ತಂದ ಬಳಿಕ ಕಾರ್ಡ್ ಪೂರೈಕೆಯಲ್ಲಿ ಸಮಸ್ಯೆ ಸೃಷ್ಟಿಯಾಗಿರುವ ಆರೋಪ ಕೇಳಿ ಬಂದಿದೆ. ಕಾರ್ಡ್ ಪೂರೈಸಿರುವ ಟೆಂಡರ್ ಪಡೆದಿರುವ ರೋಸ್ಮಾ ಮಾರ್ಟ್ ಸಂಸ್ಥೆ ಸಿಬ್ಬಂದಿ ಮಾಡಿರುವ ಎಡವಟ್ಟಿನಿಂದಾಗಿ 2018 ಕ್ಕಿಂತ ಮುಂಚೆ ರಾಜ್ಯದಲ್ಲಿ ನೋಂದಣಿಯಾಗಿರುವ ವಾಹನಗಳ ವಿವರಗಳೇ ವಾಹನ-4 ಸಾಫ್ಟ್‌ವೇರ್ ನಲ್ಲಿ ಸಿಗುತ್ತಿಲ್ಲ. 2018 ರ ನಂತರ ನೋಂದಣಿಯಾಗಿರುವ ವಾಹನಗಳ ವಿವರಗಳಷ್ಟೇ ಲಭ್ಯವಿದೆ. ಇದರಿಂದಾಗಿ ಸಿ.ಸಿ. ವಿತರಣೆಯಲ್ಲಿ ಭಾರಿ ಸಮಸ್ಯೆಯಾಗಿದ್ದು, ಪ್ರತಿನಿತ್ಯ ಸಾವಿರಾರು ವಾಹನಗಳ ಅರ್ಜಿಗಳು ಬಾಕಿ ಉಳಿಯುತ್ತಿದೆ.

ಸಿ.ಸಿ. ವಿಳಂಬವಾಗುತ್ತಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಮಧ್ಯವರ್ತಿಗಳು ವಾಹನ ಮಾಲೀಕರಿಂದ ಸುಲಿಗೆ ಮಾಡುತ್ತಿರುವ ಆರೋಪ ಕೇಳಿಬಂದಿದೆ. ಸಿ.ಸಿ. ಕೊಡಲು ಯಾವುದೇ ಶುಲ್ಕ ಪಾವತಿಸಬೇಕಿಲ್ಲ. ಆದರೆ, ಏಜೆಂಟ್‌ಗಳು ತಲಾ ವಾಹನಕ್ಕೆ 15 ರಿಂದ 20 ಸಾವಿರ ರೂಪಾಯಿ ಎಂದು ವಸೂಲಿ ಮಾಡುತ್ತಿದ್ದು ಅಷ್ಟೇ ಹಣ ಕೊಟ್ಟರೆ ಒಂದೆರಡು ದಿನದಲ್ಲೇ ಸಿ.ಸಿ. ದೊರೆಯುತ್ತದೆ. ಸದರಿ ವಿಷಯವನ್ನು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಉತ್ತರ:**

ಈ ಹಿಂದಿನ Computerised Service Deliver System at RTO offices in Karnataka ಯೋಜನೆಯು ದಿನಾಂಕ:25-02-2009 ರಿಂದ ಜಾರಿಗೆ ಬಂದಿದ್ದು, ಆ ಸಮಯದಲ್ಲಿ ಡಾಟಾ ಎಂಟ್ರಿ ಆಪರೇಟರ್ / ಟೆಕ್ನಿಕಲ್ ಕನ್ಸಲ್ಟೆಂಟ್ ರವರನ್ನು ಪಿಪಿಪಿ ಪಾಲುದಾರರಾದ ಮೆ// ರೋಸ್ ಮರ್ಟ ಟೆಕ್ನಾಲಜೀಸ್ ಪ್ರೈವೇಟ್ ಲಿ., ಸಂಸ್ಥೆಯ ಮುಖಾಂತರ ರಾಜ್ಯದ ಅಧೀನ ಕಛೇರಿಗಳಿಗೆ ಒದಗಿಸಲಾಗಿದ್ದು, ಅವರು ಮಾಡುತ್ತಿದ್ದ ಡಾಟಾ ಎಂಟ್ರಿಗಳನ್ನು RTO ಕಛೇರಿಯ ಸಿಬ್ಬಂದಿಗಳು ಪರಿಶೀಲಿಸಿ ಅನುಮೋದನೆ ನೀಡಿರುತ್ತಾರೆ. 2009 ರಿಂದ 2018 ರವರೆಗೆ Client Server Architecture ಇದ್ದು, ಪ್ರತಿಯೊಂದು ಕಛೇರಿಯಲ್ಲಿಯೂ ಪ್ರತ್ಯೇಕ ಸರ್ವರ್ ಗಳನ್ನು ಇಡಲಾಗಿದ್ದು, ಕಛೇರಿಯಲ್ಲಿ ಡಾಟಾ ಎಂಟ್ರಿ ಮಾಡುವ ಸಮಯದಲ್ಲಿ ಹಾಗೂ NIC, New Delhi ರವರು ದತ್ತಾಂಶವನ್ನು 2018 ರಲ್ಲಿ ಕೇಂದ್ರಿಕೃತ ವೆಬ್ ಆಧಾರಿತ ಪರಿವಾಹನ್ ಪೋರ್ಟಲ್ ಗೆ ವರ್ಗಾವಣೆ ಸಮಯದಲ್ಲಿ ಕೆಲವು ವ್ಯತ್ಯಯಗಳು ಉಂಟಾದ ಕಾರಣ, ಕೆಲವು ಡಾಟಾ ಸಮಸ್ಯೆಗಳು ಉದ್ಭವಿಸಿರುತ್ತದೆ. ಸದರಿ ದತ್ತಾಂಶ ಸರಿಪಡಿಸುವಿಕೆಯನ್ನು ಈ ಮೊದಲು ಸಾರಿಗೆ ಆಯುಕ್ತರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಆಯಾ ವಿಭಾಗದ ಜಂಟಿ ಸಾರಿಗೆ ಆಯುಕ್ತರಿಗೆ ದಿನಾಂಕ:02-01-2026 ರಂದು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. ಸದರಿ ದತ್ತಾಂಶ ಸಮಸ್ಯೆಯನ್ನು RTO ಕಛೇರಿಯ ಅಧಿಕಾರಿಗಳು ದತ್ತಾಂಶದಲ್ಲಿ ಸರಿಪಡಿಸಿ ಅನುಮೋದನೆಗೆ ಸಂಬಂಧಿಸಿದ ಜಂಟಿ ಸಾರಿಗೆ ಆಯುಕ್ತರಿಗೆ ಕಳುಹಿಸಿ ಅನುಮೋದನೆ ಪಡೆದು ಎಲ್ಲಾ ವಾಹನ್ ಸೇವೆಗಳನ್ನು ನೀಡಲಾಗುತ್ತಿದೆ.

ಒನ್ ನೇಷನ್ ಒನ್ ಕಾರ್ಡ್ ಯೋಜನೆಯು ದಿನಾಂಕ: 01-12-2025 ರಿಂದ ಜಾರಿಗೆ ತರಲಾಗಿದ್ದು, ಸ್ಮಾರ್ಟ್ ಕಾರ್ಡ್ ಮುದ್ರಿತವಾದ ನಂತರ 48 ಘಂಟೆಗಳಲ್ಲಿ ಬೆಂಗಳೂರು ನಗರ ವಿಭಾಗದ ಎಲ್ಲಾ ಕಛೇರಿಗಳಿಗೂ ಹಾಗೂ 96 ಘಂಟೆಗಳಲ್ಲಿ ರಾಜ್ಯದ ಇತರೆ ವಿಭಾಗದ ಕಛೇರಿಗಳಿಗೆ ಸೇವಾದಾರರು ಕೊರಿಯರ್ ಮೂಲಕ ತಲುಪಿಸುತ್ತಿದ್ದು, ಪ್ರಸ್ತುತ ಯಾವುದೇ ಸಮಸ್ಯೆಯಿರುವುದಿಲ್ಲ.

ಟಿಡಿ 49 ಟಿಡಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು